ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ– ಅಭಿಯಾನ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಪೂರಕ ಕಟ್ಟಡಗಳು ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:ಆರ್.ಎಂ.ಎಸ್.ಎ/ಮಾ.ಶಾ.ಮಾರ್ಗಸೂಚಿ/05/2010–11 ದಿನಾಂಕ: 26.07.2010.

**ಮಾದರಿ ಶಾಲೆಗಳ ಮುಖ್ಯ ಶಿಕ್ಷಕರು ವಹಿಸಬೇಕಾದ ಜವಾಬ್ದಾರಿಗಳ ಕುರಿತು ಮಾರ್ಗಸೂಚಿ**

1. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಪತ್ರ ಸಂಖ್ಯೆ:F.No.2- 8/2009-sch-1 ದಿನಾಂಕ: 12.10.2009 ಮತ್ತು F.No.2-8/2009-sch-1 ದಿನಾಂಕ: 17.12.2009
2. ರಾಜ್ಯ ಸರ್ಕಾರದ ಟಿಪ್ಪಣಿ ಅನುಮೋದನೆ ಸಂ: RMSA /ಮಾದರಿ ಶಾಲೆ/ಟಿಪ್ಪಣಿ/02/2010–11 ದಿನಾಂಕ: 06.04.2010.

************

ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ರಾಜ್ಯದ ಸಹಭಾಗಿತ್ವದೊಂದಿಗೆ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಮಾದರಿ ಶಾಲೆಗಳನ್ನು ಪ್ರಾರಂಭಿಸಲು ಅನುಮೋದನೆ ದೊರಕಿದ್ದು ಉಲ್ಲೇಖ–2 ರಲ್ಲಿ ರಾಜ್ಯ ಸರ್ಕಾರದಿಂದ ಶಾಲೆಗಳನ್ನು ಪ್ರಾರಂಬಿಸಲು ಅನುಮತಿದೊರಕಿರುತ್ತದೆ. ಅದರಂತೆ ಸಂಬಂಧಿಸಿದ ತಾಲೂಕುಗಳಲ್ಲಿ ಈ ಶಾಲೆಗಳನ್ನು ತಾತ್ಕಾಲಿಕ ವ್ಯವಸ್ಥೆಯಲ್ಲಿ 15–7–2010 ರಿಂದ ಪ್ರಾರಂಬಿಸಲಾಗಿದೆ. ಈ ಶಾಲೆಗಳು 6 ರಿಂದ 10 ನೇ ತರಗತಿಯವರೆಗೆ ತರಗತಿಗಳನ್ನು ಹೊಂದಿದ್ದು ರಾಜ್ಯದ ಪಠ್ಯಕ್ರಮವನ್ನು ಆಂಗ್ಲಮಾಧ್ಯಮದಲ್ಲಿ ಅಳವಡಿಸಿಕೊಂಡಿರುವ ಶಾಲೆಗಳಾಗಿವೆ. ಈ ಶಾಲೆಗಳಲ್ಲಿ ಪ್ರತಿ ತರಗತಿಗೆ 80 ಮಕ್ಕಳನ್ನು ದಾಖಲಿಸಿಕೊಳ್ಳಲು ಅವಕಾಶವಿರುತ್ತದೆ. ಹಾಗೂ ಈ ಶಾಲೆಗಳಿಗೆ ಕಟ್ಟಡ ಮತ್ತು ಶಿಕ್ಷಕರನ್ನು ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ನೀಡಲಾಗುತ್ತದೆ.

ಈ ಶಾಲೆಗಳ ಹಣಕಾಸು ನಿರ್ವಹಣೆಗೆ ಪ್ರತ್ಯೇಕವಾಗಿ ಸ್ಟೇಟ್ ಬ್ಯಾಂಕ್ ಆಪ್ ಮೈಸೂರಿನಲ್ಲಿ ಖಾತೆಯನ್ನು ತೆರೆಯಲಾಗಿದ್ದು ಈ ಖಾತೆಗೆ ಹಣವನ್ನು ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ರಾಜ್ಯ ಕಛೇರಿಯ ಮಾರ್ಗ ಸೂಚಿಯಂತೆ ಬಳಸಿ ಲೆಕ್ಕಪತ್ರಗಳನ್ನು ನಿರ್ವಹಿಸಲು ತಿಳಿಸಿದೆ. ಈ ಶಾಲೆಗಳಿಗೆ ಮುಖ್ಯ ಶಿಕ್ಷಕರನ್ನು ತಾತ್ಕಾಲಿಕವಾಗಿ ನಿಯೋಜಿಸಿದ್ದು ಮುಖ್ಯ ಶಿಕ್ಷಕರು ನಿರ್ವಹಿಸಬೇಕಾದ ಕಾರ್ಯಗಳ ಮಾರ್ಗಸೂಚಿಯನ್ನು ನೀಡಲಾಗುತ್ತಿದೆ.

1. ಮಾದರಿಶಾಲೆಯ ನಾಮಫಲಕವನ್ನು ಬರೆಸುವುದು.

ಕರ್ನಾಟಕ ಸರ್ಕಾರ

**ಮಾದರಿ ಶಾಲೆ**

(ಕೇಂದ್ರ ಪುರಸ್ಕೃತ ಯೋಜನೆ–RMSA)

____________________

__________________ತಾಲ್ಲೂಕು.

__________________ಜಿಲ್ಲೆ.

2. ಮಾದರಿ ಶಾಲೆಯ ಬ್ಯಾಂಕ್ ಖಾತೆಯನ್ನು ಜಂಟಿ ಖಾತೆಯಲ್ಲಿ ನಿರ್ವಹಿಸಬೇಕಾಗಿದ್ದು ಈ ಕೆಳಗಿನಂತೆ ಮೊಹರು (ಸೀಲು) ಮಾಡಿಸುವುದು.

ಮುಖ್ಯ ಶಿಕ್ಷಕರು ಹಿರಿಯ ಶಿಕ್ಷಕರು

ಮಾದರಿ ಶಾಲೆ(RMSA)

____________________

__________________ತಾಲ್ಲೂಕು__________________ಜಿಲ್ಲೆ

ತಾಲ್ಲೂಕು ಕೇಂದ್ರ ಸ್ಥಳದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ (SBM) ಖಾತೆಯನ್ನು ತೆರೆಯಲಾಗಿದ್ದು, ಸೀಲಿನೊಡನೆ ಬ್ಯಾಂಕಿಗೆ ಹೋಗಿ ಖಾತೆಯನ್ನು ತೆರೆಯಲು ಬೇಕಾದ ದಾಖಲೆಗಳನ್ನು ಒದಗಿಸುವುದು.

ಮಾದರಿ ಶಾಲೆಯ ಅಧಿಕೃತ ಸೀಲನ್ನು ಈ ಕೆಳಗಿನಂತೆ ಮಾಡಿಸುವುದು.

ಮುಖ್ಯ ಶಿಕ್ಷಕರು

**ಮಾದರಿ ಶಾಲೆ(RMSA)**

________________________

________________ತಾಲ್ಲೂಕು________________ಜಿಲ್ಲೆ

3. ಶಾಲೆಗಳಿಗೆ ಬೋಧನೋಪಕರಣಗಳನ್ನು ಒದಗಿಸುವುದು:- ರೂ, 3000/- ಮೀರದಂತೆ. ಸಂಬಂಧಿಸಿದ ವಿಷಯಗಳನ್ನು ಬೋಧಿಸುತ್ತಿರುವ ಶಿಕ್ಷಕರೊಡನೆ ಸಭೆ ನಡೆಸಿ ಅವಶ್ಯ ಬೋಧನೋಪಕರಣಗಳನ್ನು ಗುರ್ತಿಸುವುದು. ಹೆಚ್ಚಿನ ಅನುದಾನ ಅವಶ್ಯವಿದ್ದಲ್ಲಿ ವಿವರಗಳೊಡನೆ ಈ ಕಛೇರಿಗೆ ಬರೆಯುವುದು.
   - 6 ಮತ್ತು 7 ನೇ ತರಗತಿಗೆ, ಸಂಬಂದಿಸಿದ ಆಂಗ್ಲ ಭಾಷೆಯಲ್ಲಿನ ವಿಜ್ಞಾನಕ್ಕೆ ಸಂಬಂಧಿಸಿದ ಛಾರ್ಟುಗಳು
   - 6 ಮತ್ತು 7 ನೇ ತರಗತಿಗೆ ಸಂಬಂಧಿಸಿದ ಆಂಗ್ಲ ಭಾಷೆಯಲ್ಲಿನ ಗಣಿತ ಛಾರ್ಟುಗಳು ಮತ್ತು ಜಾಮಿಟ್ರಿಬಾಕ್ಸ್
   - ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಆಂಗ್ಲ ಭಾಷೆಯಲ್ಲಿನ ಭಾರತನಕ್ಷೆ (ಭೌಗೋಳಿಕ), ಭಾರತ (ರಾಜಕೀಯ), ಕರ್ನಾಟಕ ರಾಜ್ಯ ಭೌಗೋಳಿಕ ಮತ್ತು ರಾಜಕೀಯ, ಪ್ರಪಂಚ ನಕ್ಷೆ ಭೌಗೋಳಿಕ ಮತ್ತು ರಾಜಕೀಯ ಮುಂತಾದುವು
4. **ಶಾಲೆಗೆ ಪೀಠೋಪಕರಣ-** 30,000/-ರೂ. ಮೀರದಂತೆ.

   8 'S' Type Chairs
   5 2X4 Small Tables, For Teachers
   1 3X4 Table for H.M
   1 Cupboard(Almeihra)
   1 School Bell.

5. **ಕ್ರೀಡೋಪಕರಣಗಳು-** 6 ನೇ ತರಗತಿ ವಿದ್ಯಾರ್ಥಿಗಳಿಗೆ ಪೂರಕವಾಗುವಂತೆ
   - ಟೆನ್ನಿಕಾಯ್ಟ್ ರಿಂಗ್, ಸ್ಕಿಪಿಂಗ್ ರೋಪ್, ಥ್ರೋಬಾಲ್, ಚೆಸ್, ಕೇರಂ ಬೋರ್ಡ್, ಡಂಬಲ್ಸ್ ಬ್ಯಾಂಡ್ ಸೆಟ್, ಸಂಗೀತ ಶಿಕ್ಷಕರ ಸೌಲಭ್ಯವಿದ್ದಲ್ಲಿ ಹಾರ್ಮೋನಿಯಂ, ಕಂಜರ – ರೂ. 5000/- ಮೀರದಂತೆ.
6. ಶಾಲೆಗೆ ಅವಶ್ಯವಾದ ಕಪ್ಪುಹಲಗೆ ದುರಸ್ಥಿ, ಸೀಮೆಸುಣ್ಣ, ಬಿಳಿಕಾಗದ, ಪೆನ್ನು, ಪೆನ್ಸಿಲ್, ರಬ್ಬರ್ ಮುಂತಾದವುಗಳಿಗಾಗಿ ರೂ. 1000/- ಮೀರದಂತೆ.
7. **ಗ್ರಂಥಾಲಯಕ್ಕಾಗಿ-** ರೂ, 8000/- ಮೀರದಂತೆ
   - ಮಕ್ಕಳಿಗೆ ಆಂಗ್ಲಭಾಷೆಯ ಕಾಮಿಕ್ಸ್ ಪುಸ್ತಕಗಳು, ಚಿತ್ರ ಸಹಿತ ಕಥಾಪುಸ್ತಕಗಳು, Rhymes Book
   - ಗಣಿತ,ವಿಜ್ಞಾನ ಹಾಗು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ಆಂಗ್ಲ ಮಾಧ್ಯಮದ ಪುಸ್ತಕಗಳು
   - English to English - Small Dictionary – 20
   - English to Kannada Dictionary - 10
   - ವಾರ್ತಾ ಪತ್ರಿಕೆಗಳು – 2 ಕನ್ನಡ – 2 ಆಂಗ್ಲ ಭಾಷೆ
8. ದೂರದಿಂದ ಬರುವ ಬಡವಿದ್ಯಾರ್ಥಿಗಳಿದ್ದಲ್ಲಿ ಸರ್ಕಾರಿ ಬಸ್ ಗಳಲ್ಲಿ ಪಾಸ್ ಕೊಡಿಸುವುದು.
9. ತಾತ್ಕಾಲಿಕ ವ್ಯವಸ್ಥೆಯಲ್ಲಿ ಗುರ್ತಿಸಿರುವ ಶಾಲಾ ಕೊಠಡಿಗಳು ಆಕರ್ಷಣೀಯವಾಗಿರುವಂತೆ ಸುಣ್ಣ ಬಣ್ಣ, ಸಣ್ಣ ಪುಟ್ಟ ದುರಸ್ತಿಗಳಿಗಾಗಿ ರೂ 5000/- ಮೀರದಂತೆ ಬಳಸಿಕೊಳ್ಳುವುದು.

10. ಮಕ್ಕಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಫಿಲ್ಟರ್/ಡ್ರಮ್ ಒದಗಿಸುವುದು ರೂ2000/-ಮೀರದಂತೆ

ಈ ಶಾಲೆಗಳು ಆಂಗ್ಲ ಮಾಧ್ಯಮದ ಶಾಲೆಗಳಾಗಿರುವುದರಿಂದ ಮುಖ್ಯಶಿಕ್ಷಕರು ಮಕ್ಕಳಲ್ಲಿ ಆಂಗ್ಲಭಾಷೆ ಮಾತನಾಡುವ,ಓದುವ ಮತ್ತು ಬರೆಯುವ ಸಾಮರ್ಥ್ಯ ಬೆಳೆಯಲು ಪೂರಕವಾಗುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

ಈ ಕೆಳಗೆ ಕೆಲವು ಉದಾಹರಣೆಗಳನ್ನು ನೀಡಲಾಗಿದೆ, ಇವುಗಳನ್ನು ಪ್ರಯತ್ನಿಸುವುದು.

- ಪ್ರತಿ ದಿನ 5 ಆಂಗ್ಲ ಪದಗಳನ್ನು ಮಕ್ಕಳು Dictionary ಸಹಾಯದಿಂದ ಅರ್ಥಸಹಿತ ಕಲಿಯುವಂತೆ ಚಟುವಟಿಕೆ ರೂಪಿಸುವುದು.
- ಆಂಗ್ಲ ವರ್ಣ ಮಾಲೆಯನ್ನು ಕಲಿತಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು-ಅವಶ್ಯವಿರುವರಿಗೆ ಕಲಿಸುವುದು-ಗುರ್ತಿಸುವುದು, ಬರೆಯುವುದು [Recognise-Read-Write]
- 8 ದಿಕ್ಕುಗಳನ್ನು ಆಂಗ್ಲ ಭಾಷೆಯಲ್ಲಿ ಗುರ್ತಿಸುವುದು.
- ದೇಹದ ಭಾಗಗಳನ್ನು ಆಂಗ್ಲ ಭಾಷೆಯಲ್ಲಿ ಹೇಳಿಸುವುದು,ಬರೆಸುವುದು.
- ದೈನಂದಿನ ಜೀವನದಲ್ಲಿ ಮನೆ, ಶಾಲೆಯಲ್ಲಿ ಬಳಸುವ ವಸ್ತುಗಳನ್ನು ಆಂಗ್ಲ ಭಾಷೆಯಲ್ಲಿ ಪರಿಚಯಿಸುವುದು ಬರೆಸುವುದು
- Salutations ಪರಿಚಯ ಮಾಡಿಸಿ ಬರೆಸುವುದು ಮತ್ತು ದೈನಂದಿನ ಜೀವನದಲ್ಲಿ ಬಳಸುವ ಬಗ್ಗೆ ಚಟುವಟಿಕೆಗಳನ್ನು ರೂಪಿಸುವುದು.

  [ಉದಾ: Good morning, Thank you, Welcome, Please, excuse me ಮುಂತಾದವುಗಳು]
- ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಗಣಿತಕ್ಕೆ ಸಂಬಂಧಿಸಿದ ಮುಖ್ಯ ಪದಗಳನ್ನು ಆಂಗ್ಲ ಭಾಷೆಯಲ್ಲಿ ಪರಿಚಯಿಸುವುದು- ಕಲಿಸುವುದು
- ಆಂಗ್ಲಭಾಷೆಯಲ್ಲಿ ಮಗ್ಗಿ ಹೇಳುವ ಸಾಮರ್ಥ್ಯವನ್ನು ಬೆಳೆಸುವುದು.
- ಆಂಗ್ಲ ಭಾಷೆಯ ಕಾಪಿ ಪುಸ್ತಕ ಬರೆಸುವುದು.
- ಆಂಗ್ಲ ಭಾಷೆಯಲ್ಲಿ ಅಂತಾಕ್ಷರಿ (Word building)
- ಆಂಗ್ಲ ಮತ್ತು ಕನ್ನಡ ವಾರ್ತಾ ಪತ್ರಿಕೆಗಳನ್ನು ಓದಿಸುವುದು
- ಆಂಗ್ಲ ಮತ್ತು ಕನ್ನಡ ವಾರ್ತೆಗಳನ್ನು ನೋಟೀಸ್ ಬೋರ್ಡಿನಲ್ಲಿ ಮಕ್ಕಳಿಂದ ಬರೆಸುವುದು.
- ಆಂಗ್ಲ ಭಾಷೆಯಲ್ಲಿ ಬೋಧಿಸಬಲ್ಲ ಶಿಕ್ಷಕರನ್ನು ಗುರ್ತಿಸಿ ಅತಿಥಿ ಪಾಠಗಳನ್ನು (Guest Lectures) ಮಾಡಿಸುವುದು.
- ಹತ್ತಿರದ ಶಾಲೆಯಲ್ಲಿ ಕಂಪ್ಯೂಟರ್‌ಗಳ ಲಭ್ಯವಿದ್ದಲ್ಲಿ ಈ ಶಾಲೆಗೆ 2 ಕಂಪ್ಯೂಟರ್ ಗಳನ್ನು ಒದಗಿಸುವುದು.

ತಮ್ಮಲ್ಲಿ ಮತ್ತಷ್ಟು ಚಟುವಟಿಕೆಗಳಿರಬಹುದು, ಅವುಗಳನ್ನು ಮಕ್ಕಳಿಗೆ ಪರಿಚಯಿಸಿ-ಕಲಿಸಿ-ವಿನಿಮಯ ಮಾಡಿಕೊಳ್ಳಿ

ಈ ಮೇಲಿನ ಮಾರ್ಗಸೂಚಿಯನ್ವಯ ಆದ್ಯತೆಯ ಮೇಲೆ ನಿಯಮಾನುಸಾರ ಕ್ರಮವಹಿಸುವುದು ಹಾಗು ತರಗತಿಗಳಲ್ಲಿ ಬಳಸಿಕೊಳ್ಳುವುದು. ಈ ಬಗ್ಗೆ ಸಂದೇಹಗಳಿದ್ದಲ್ಲಿ ರಾಜ್ಯ ಕಛೇರಿಯನ್ನು ಸಂಪರ್ಕಿಸುವುದು.

(ಮಾರ್ಗಸೂಚಿಯ ಕರಡು ರಾಜ್ಯ ಯೋಜನಾ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

(ಡಿ.ವೆಂಕಟೇಶಯ್ಯ)
ಸಹ ನಿರ್ದೇಶಕರು(ಆಡಳಿತ)
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಪ್ರತಿಯನ್ನು,

1. ರಾಜ್ಯದ ಎಲ್ಲಾ ಮಾದರಿ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಕ್ರಮಕ್ಕಾಗಿ,
2. ಮಾದರಿ ಶಾಲೆಗಳನ್ನು ಹೊಂದಿರುವ ಜಿಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತ್ತಿಗಾಗಿ,
3. ಮಾದರಿ ಶಾಲೆಗಳನ್ನು ಹೊಂದಿರುವ ಬ್ಲಾಕ್‌ಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತ್ತಿಗಾಗಿ,
4. ಕಛೇರಿ ಪ್ರತಿ.